ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 ದಿನಾಂಕ: 20–11–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | "ನೀರು ಜೀವನಾಮೃತ–ಪ್ರತಿ ಹನಿ ನೀರನ್ನು ಉಳಿಸಿ" ಕುರಿತು ಕಾರ್ಯಾಗಾರ:<br><br>ಉದ್ಘಾಟನೆ:<br><br>ಗೌರವಾನ್ವಿತ ನ್ಯಾಯಮೂರ್ತಿ ಎನ್.ಕೆ.ಪಾಟೀಲ್,<br><br>ನ್ಯಾಯಧೀಶರು, ಕರ್ನಾಟಕ ಉಚ್ಛ ನ್ಯಾಯಾಲಯ ಹಾಗೂ ಕಾರ್ಯನಿರ್ವಾಹಕ ಅಧ್ಯಕ್ಷರು, ಕ.ರಾ.ಕಾ.ಸೇ.ಪ್ರಾ.<br><br>ಅಧ್ಯಕ್ಷತೆ:<br><br>ಡಾ. ಖಮರುಲ್ ಇಸ್ಲಾಂ,<br><br>ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು.<br><br>ಮುಖ್ಯ ಅತಿಥಿ:<br><br>ಕೆ.ಜೆ. ಜಾರ್ಜ್,<br><br>ಬೆಂಗಳೂರು ನಗರಾಭಿವೃದ್ಧಿ ಹಾಗೂ ನಗರ | 21–11–2015<br><br>ಶನಿವಾರ<br><br>ಬೆಳಿಗ್ಗೆ<br><br>10–30 ಗಂಟೆಗೆ | ಬ್ಯಾಂಕ್ವೆಟ್ ಹಾಲ್,<br>ವಿಧಾನಸೌಧ,<br>ಬೆಂಗಳೂರು. |

| | | | |
|---|---|---|---|
| | ಯೋಜನಾ ಸಚಿವರು.<br><br>ವಿನಯ್‌ಕುಮಾರ್ ಸೊರಕೆ,<br><br>ನಗರಾಭಿವೃದ್ಧಿ ಸಚಿವರು. | | |
| 2. | <u>ಕೃಷಿ ಮೇಳ – 2015:</u><br><br>ಪ್ರಶಸ್ತಿ ಪ್ರದಾನ ಸಮಾರಂಭ:<br><br><u>ಪ್ರಶಸ್ತಿ ಪ್ರದಾನ:</u><br><br>ಹೆಚ್.ಡಿ. ದೇವೇಗೌಡ,<br>ಮಾಜಿ ಪ್ರಧಾನ ಮಂತ್ರಿ ಹಾಗೂ ಲೋಕಸಭಾ ಸದಸ್ಯರು, ಹಾಸನ<br><br>ಬಿ. ರಮಾನಾಥ ರೈ,<br>ಅರಣ್ಯ ಮತ್ತು ಪರಿಸರ ಸಚಿವರು.<br><br>ಶ್ಯಾಮನೂರು ಶಿವಶಂಕರಪ್ಪ,<br>ತೋಟಗಾರಿಕಾ ಮತ್ತು ಕೃಷಿ ಮಾರುಕಟ್ಟೆ ಸಚಿವರು<br><br><u>ಅಧ್ಯಕ್ಷತೆ:</u><br><br>ಡಾ. ಹೆಚ್. ಶಿವಣ್ಣ,<br>ಕುಲಪತಿಗಳು,<br>ಕೃಷಿ ವಿಶ್ವವಿದ್ಯಾನಿಲಯ<br>ಬೆಂಗಳೂರು.<br><br>ವಿ.ಸೂ.:ಈ ಕಾರ್ಯಕ್ರಮಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ಬೆಳಿಗ್ಗೆ 10–15 ಗಂಟೆಗೆ ನಿಗದಿತ ಸ್ಥಳದತ್ತ ತೆರಳಲಿದೆ. | **21–11–2015**<br><br>ಶನಿವಾರ<br><br>ಬೆಳಿಗ್ಗೆ<br><br>**11–00** ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿ.ಕೆ.)<br>ಬೆಂಗಳೂರು |

| | | | |
|---|---|---|---|
| 3. | **ಕೃಷಿ ಮೇಳ – 2015:**<br>ರೈತರಿಂದ ರೈತರಿಗಾಗಿ ಚರ್ಚಾಗೋಷ್ಠಿ<br>ಉದ್ಘಾಟನೆ:<br><br>ಡಾ. ಜೆ. ವಿ. ಗೌಡ್,<br>ವಿಶ್ರಾಂತ ಕುಲಪತಿಗಳು,<br>ಕೃಷಿ ವಿಶ್ವವಿದ್ಯಾಲಯ,<br>ಧಾರವಾಡ<br><br>ವಿಶೇಷ ಅತಿಥಿಗಳು:<br><br>ಕೋಡಿಹಳ್ಳಿ ಚಂದ್ರಶೇಖರ್,<br>ಅಧ್ಯಕ್ಷರು,<br>ಕರ್ನಾಟಕ ರಾಜ್ಯ ರೈತ ಸಂಘ (ಹಸಿರು ಸೇನೆ)<br><br>ಅಧ್ಯಕ್ಷತೆ:<br><br>ಡಾ. ಹೆಚ್. ಶಿವಣ್ಣ,<br>ಕುಲಪತಿಗಳು,<br>ಕೃಷಿ ವಿಶ್ವವಿದ್ಯಾನಿಲಯ<br>ಬೆಂಗಳೂರು.<br><br>ವಿ.ಸೂ.: ಈ ಕಾರ್ಯಕ್ರಮಕ್ಕೆ ವಾಹನ ವ್ಯವಸ್ಥೆ ಮಾಡಲಾಗಿದ್ದು ವಾಹನವು ಅಂದು | **21–11–2015**<br>ಶನಿವಾರ<br>ಮಧ್ಯಾಹ್ನ<br>2–30 ಗಂಟೆಗೆ | ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿ.ಕೆ.)<br>ಬೆಂಗಳೂರು |

| | | | |
|---|---|---|---|
| | ಬೆಂಗಳೂರು ಪ್ರೆಸ್‌ಕ್ಲಬ್ ಆವರಣದಿಂದ ಮಧ್ಯಾಹ್ನ 1–15 ಗಂಟೆಗೆ ನಿಗದಿತ ಸ್ಥಳದತ್ತ ತೆರಳಲಿದೆ | | |
| 4. | <u>ಬೆಳ್ಳಿ ಸಿನಿಮಾ – ಬೆಳ್ಳಿಮಾತು:</u><br>ಬೆಳ್ಳಿ ಸಿನಿಮಾ ಪ್ರದರ್ಶನ –"ಮುನ್ಸೀಫ "<br><u>ಬೆಳ್ಳಿಮಾತು:</u><br>ಉಮಾಶಂಕರಸ್ವಾಮಿ,<br>ಚಿತ್ರದ ನಿರ್ದೇಶಕರು<br><u>ಅಂದು ನಮ್ಮೊಂದಿಗೆ:</u><br>ಜಿ.ಎಸ್. ಭಾಸ್ಕರ್,<br>ಸಿನಿಮಾಟೋಗ್ರಾಫರ್<br><u>ಅಧ್ಯಕ್ಷತೆ:</u><br>ಎಸ್. ವಿ. ರಾಜೇಂದ್ರಸಿಂಗ್ ಬಾಬು,<br>ಅಧ್ಯಕ್ಷರು<br>ಕರ್ನಾಟಕ ಚಲನಚಿತ್ರ ಅಕಾಡೆಮಿ | **21–11–2015**<br>ಶನಿವಾರ<br>ಸಂಜೆ<br>**4–00** ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋ,<br>ಮಿಲ್ಲರ್ಸ್ ರಸ್ತೆ,<br>ಬೆಂಗಳೂರು |
| 5. | ಮ್ಯಾಪಿಂಗ್ ವಿತ್ ಫಿಗರ್ಸ್ ದಿ ಇವಾಲ್ವಿಂಗ್ ಆರ್ಟ್ ಆಫ್ ಕೆ. ಎಸ್. ರಾಧಾಕೃಷ್ಣನ್:<br><u>ಪ್ರದರ್ಶನ ಉದ್ಘಾಟನೆ:</u><br>ಶ್ರೀಮತಿ ಅರುಂಧತಿ ನಾಗ್,<br>ಖ್ಯಾತ ರಂಗಕರ್ಮಿ<br><u>ಮುಖ್ಯ ಅತಿಥಿ:</u><br>ಪ್ರಮೋದ್ ಜೈನ್ | **21–11–2015**<br>ಶನಿವಾರ<br>ಸಂಜೆ<br>**6–00** ಗಂಟೆಗೆ | ರಾಷ್ಟ್ರೀಯ ಆಧುನಿಕ ಕಲಾ ಸಂಗ್ರಹಾಲಯ, ನಂ 49,ಮಾಣಿಕ್ಯವೇಲು ಮ್ಯಾನ್ಷನ್, ಅರಮನೆ ರಸ್ತೆ, ಬೆಂಗಳೂರು – **560 052.** |

| | | | |
|---|---|---|---|
| | ಜಂಟಿ ಕಾರ್ಯದರ್ಶಿಗಳು,<br><br>ಸಂಸ್ಕೃತಿ ಸಚಿವಾಲಯ,<br><br>ಭಾರತ ಸರ್ಕಾರ.<br><br>ಉಪಸ್ಥಿತಿ:<br><br>ಎಸ್. ಜಿ. ವಾಸುದೇವ್,<br><br>ಖ್ಯಾತ ಕಲಾವಿದರು. | | |

ನಿರ್ದೇಶಕರ ಪರವಾಗಿ

## ವಿಧಾನ ಮಂಡಲದಲ್ಲಿ ಇಂದು

# ಸ್ಥಳೀಯ ಜಾನುವಾರು ತಳಿ ಅಭಿವೃದ್ಧಿಗೆ ಕಾರ್ಯಕ್ರಮ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಸ್ಥಳೀಯ ಜಾನುವಾರು ತಳಿಗಳ ಸಂವರ್ಧನೆ ಮತ್ತು ಸಂರಕ್ಷತೆಗಾಗಿ, ಅಜ್ಜಾಂಪುರ ಜಾನುವಾರು ಕ್ಷೇತ್ರಗಳಲ್ಲಿ ಅಮೃತ ಮಹಲ್ ತಳಿ, ಕುಣೀಕೆನಹಳ್ಳಿ ಕ್ಷೇತ್ರದಲ್ಲಿ ಹಳ್ಳಿಕಾರ್ ತಳಿ, ಬೀದರ್‌ನಲ್ಲಿ ದೇವಣಿ ತಳಿ, ಮುನಿರಾಬಾದ್‌ನಲ್ಲಿ ಕೃಷ್ಣ ವ್ಯಾಲಿ ತಳಿ ಹಾಗೂ ಬಂಕಾಪುರ ಕ್ಷೇತ್ರದಲ್ಲಿ ಬಿಲ್ಲಾರ್ ತಳಿಗಳನ್ನು ಸಂವರ್ಧನೆಮಾಡಿ ಸಂರಕ್ಷಿಸಲಾಗುತ್ತಿದ್ದು, ಉತ್ಕೃತಷ್ಟ ಗುಣಮಟ್ಟದ ಹೋರಿ ತಳಿಗಳನ್ನು ಹಾಗೂ ವೀರ್ಯ ನಳಿಕೆಗಳನ್ನು ರೈತರ ಜಾನುವಾರು ಸಂರಕ್ಷಣೆ ಅಭಿವೃದ್ಧಿ ಕೃತಕ ಗರ್ಭಧಾರಣೆ ಬಳಕೆಗೆ ಒದಗಿಸಲಾಗುತ್ತಿದೆ ಎಂದು ಇಂದು ವಿಧಾನಸಭೆಯ ಪ್ರಶ್ನೋತ್ತರ ವೇಳೆಯಲ್ಲಿ ಬೀಳಗಿ ಶಾಸಕ ಜೆ.ಟಿ. ಪಾಟೀಲ್ ಅವರ ಪ್ರಶ್ನೆಗೆ ಪಶುಸಂಗೋಪನೆ ಮತ್ತು ರೇಷ್ಮೆ ಖಾತೆ ರಾಜ್ಯ ಸಚಿವ ಎ. ಮಂಜು ಅವರು ಉತ್ತರ ನೀಡುತ್ತಾ ತಿಳಿಸಿದರು.

ರಾಷ್ಟ್ರೀಯ ಗೋಕುಲ ಮಿಶನ್ ಯೋಜನೆಯು 2015-16 ನೇಸಾಲಿಗೆಮಂಜೂರಾಗಿದ್ದು, ರಾಷ್ಟ್ರೀಯ ಕೃಷಿವಿಕಾಸ ಯೋಜನೆ (ಆರ್.ಕೆ.ವಿ.ವೈ) ಮತ್ತು ನ್ಯಾಷನಲ್ ಪ್ರಾಜೆಕ್ಟ್ ಬ್ರೋವೈನ್ ಟ್ರೇಡಿಂಗ್ (ಎನ್.ಪಿ.ಟಿ.ಬಿ)ಯೋಜನೆಯಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗಿದೆ. ಇದಕ್ಕಾಗಿ ಮಡಿಕೇರಿಯ ಕೂಡಿಗೆ ಕ್ಷೇತ್ರದಲ್ಲಿ/ದಕ್ಷಿಣ ಕನ್ನಡದ ಕೊಯ್ಲಾ ಕ್ಷೇತ್ರದಲ್ಲಿ ಮಲೆನಾಡು ಗಿಡ್ಡ ಹಾಗೂ ಕುರಿಕುಪ್ಪೆ /ಬೀದರ್ ಕ್ಷೇತ್ರದಲ್ಲಿ ದೇವಣಿ ತಳಿಗಳ ಗೋಕುಲ ಗ್ರಾಮವನ್ನು ಸ್ಥಾಪಿಸಿ ಉತ್ತಮ ಗುಣಮಟ್ಟದ ಭ್ರೂಣ/ವೀರ್ಯ

ನಳಿಕೆಗಳು/ಹೋರಿ ಕರುಗಳನ್ನು ಉತ್ಪಾದಿಸಿ ರೈತರಿಗೆ ವಿತರಿಸಲಾಗುವುದು ಎಂದು ತಮ್ಮ ಉತ್ತರದಲ್ಲಿ ಸಚಿವರು ತಿಳಿಸಿದರು.

ಪಶುವೈದ್ಯಕೀಯ ಮಹಾ ವಿಶ್ವವಿದ್ಯಾಲಯ, ಶಿವಮೊಗ್ಗದಲ್ಲಿ ಮಲೆನಾಡು ಗಿಡ್ಡ ಸಂಶೋಧನಾ ಹಾಗೂ ಮಾಹಿತಿ ಕೇಂದ್ರ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆ. ದೇವಣಿ ತಳಿಗಳ ಸಂರಕ್ಷಣೆಗಾಗಿ: ಜಾನುವಾರು ಸಂಶೋಧನಾ ಮತ್ತು ಮಾಹಿತಿ ಕೇಂದ್ರವನ್ನು ಹಳ್ಳಿಖೇಡ, ಬೀದರ್‌ನಲ್ಲಿ ಸ್ಥಾಪಿಸಲಾಗಿದ್ದು, ಕಾರ್ಯನಿರ್ವಹಿಸುತ್ತಿದೆ ಎಂದು ಸಚಿವರು ತಿಳಿಸಿದರು.

ಬಾಬು:ಜಿಪಿಆರ್.

## ತೆಂಗು ಬೆಳೆ ಪುನಶ್ಚೇತನ ಕಾರ್ಯಕ್ರಮದಡಿ ಸಹಾಯಧನ ನೀಡಿಕೆ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ

ತೆಂಗು ಬೆಳೆ ಪುನಶ್ಚೇತನ ಕಾರ್ಯಕ್ರಮಕ್ಕೆ ಕೇಂದ್ರ ಸರ್ಕಾರದ ರಾಷ್ಟ್ರೀಯ ವಿಕಾಸ ಯೋಜನೆಯಡಿ ಈವರೆಗೂ ರೂ 1834.258 ಲಕ್ಷ ಹಾಗೂ ರಾಜ್ಯ ಸರ್ಕಾರದ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ರೂ. 190.52 ಲಕ್ಷಗಳ ಸಹಾಯಧನ ನೀಡಲಾಗಿದೆ ಎಂದು ಇಂದು ವಿಧಾನಸಭೆಯ ಪ್ರಶ್ನೋತ್ತರ ವೇಳೆ ಸಂದರ್ಭದಲ್ಲಿ ಶಾಸಕ ಕೆ.ಎಂ.ಶಿವಲಿಂಗೇಗೌಡ ಅವರ ಪ್ರಶ್ನೆಗೆ ಕೃಷಿ ಮಾರುಕಟ್ಟೆ ಹಾಗೂ ತೋಟಗಾರಿಕೆ ಸಚಿವ ಶ್ಯಾಮನೂರು ಶಿವಶಂಕರಪ್ಪ ಅವರು ನೀಡಿದ ಉತ್ತರದಲ್ಲಿ ತಿಳಿಸಿದರು.

2015-16 ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ರೂ.700 ಲಕ್ಷ ವಾರ್ಷಿಕ ಗುರಿಯಿದ್ದು, ಕಾರ್ಯಕ್ರಮವು ಅನುಷ್ಠಾನದ ಹಂತದಲ್ಲಿದೆ. ಇದುವರೆವಿಗೂ ರಾಜ್ಯದಲ್ಲಿ 26274 ಜನರಿಗೆ ಸಹಾಯಧನ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಬಾಬು:ಜಿಪಿಆರ್.

## ಸಚಿವರುಗಳ ಕಚೇರಿ, ನಿವಾಸ- ದುರಸ್ತಿ, ಪೀಠೋಪಕರಣಗಳಿಗೆ 7.64 ಕೋಟಿ ರೂ. ವೆಚ್ಚ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ

ರಾಜ್ಯದ ಸಚಿವ ಸಂಪುಟದ ಸದಸ್ಯರುಗಳ ಕಚೇರಿ ಹಾಗೂ ಅಧಿಕೃತ ನಿವಾಸಗಳ ದುರಸ್ತಿ/ಅಭಿವೃದ್ಧಿ/ನವೀಕರಣ ಹಾಗೂ ಪೀಠೋಪಕರಣಗಳಿಗಾಗಿ 2014 ರ ಜನವರಿಗೆ ಇಲ್ಲಿಯವರೆಗೆ 764.19 ಲಕ್ಷ ರೂ. ಗಳನ್ನು ವೆಚ್ಚಮಾಡಲಾಗಿದೆ ಎಂದು ರಾಜ್ಯ ಲೋಕೋಪಯೋಗಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಅವರು ಇಂದು ವಿಧಾನಸಭೆಯಲ್ಲಿ ಮಹಾಲಕ್ಷ್ಮೀ ಲೇಔಟ್ ಶಾಸಕ ಕೆ. ಗೋಪಾಲಯ್ಯ ಅವರ ಪ್ರಶ್ನೆಗೆ ನೀಡಿದ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟದ ಸಚಿವರ ಕಚೇರಿಗಳ ದುರಸ್ತಿ/ಅಭಿವೃದ್ಧಿ/ನವೀಕರಣಕ್ಕಾಗಿ ರೂ. 141.4 ಲಕ್ಷ ರೂ. ಗಳನ್ನು, ಕಚೇರಿಗಳಿಗೆ ಒದಗಿಸಲಾದ ಪೀಠೋಪಕರಣಗಳಿಗಾಗಿ ರೂ. 126.60 ಲಕ್ಷ, ಅಧಿಕೃತ ನಿವಾಸಗಳ ದುರಸ್ತಿ/ಅಭಿವೃದ್ಧಿ/ನವೀಕರಣಕ್ಕಾಗಿ ರೂ 375.84 ಲಕ್ಷ ಹಾಗೂ ಅಧಿಕೃತ ನಿವಾಸಗಳಿಗೆ ಒದಗಿಸಿರುವ ಪೀಠೋಪಕರಣಗಳಿಗಾಗಿ ರೂ. 120.51 ಲಕ್ಷ ವೆಚ್ಚ ಮಾಡಲಾಗಿದೆ. ಅತ್ಯಾವಶಕ ಕಾಮಗಾರಿಗಳನ್ನು ಮಾತ್ರ ವೆಚ್ಚವನ್ನು ಮಿತಿಗೊಳಿಸಿ ನಿರ್ವಹಿಸಲಾಗಿರುತ್ತದೆ ಎಂದು ಸಚಿವರು ತಮ್ಮ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬಾಬು:ಜಿಪಿಆರ್.

# ಪ್ರವಾಸೋದ್ಯಮ ಬೆಳೆಸಿ ಉದ್ಯೋಗ ಸೃಷ್ಠಿ

**– ಆರ್.ವಿ. ದೇಶಪಾಂಡೆ**

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ ಸ್ಥಳೀಯ ವ್ಯಕ್ತಿಗಳಿಗೆ ಉದ್ಯೋಗಾವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪ್ರತಿ ಜಿಲ್ಲೆಗೆ ತಲಾ ಒಬ್ಬರಂತೆ 30 ಜಿಲ್ಲಾ ಪ್ರವಾಸೋದ್ಯಮ ಸಮಾಲೋಚಕರನ್ನು ನೇಮಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಸಚಿವ ಆರ್. ವಿ. ದೇಶಪಾಂಡೆ ಅವರು ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ವಿಧಾನ ಪರಿಷತ್ ಸದಸ್ಯ ಟಿ.ಎ. ಶರವಣ ಅವರ ಪ್ರಶ್ನೆಗೆ ಉತ್ತರಿಸುತ್ತಾ ರಾಜ್ಯದ ವಿವಿಧ ಜಿಲ್ಲೆಗಳಲ್ಲಿರುವ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಯಾತ್ರಿ ನಿವಾಸ, ಶೌಚಾಲಯ ನಿರ್ಮಾಣ ಧ್ವನಿ ಮತ್ತು ಬೆಳಕು ಯೋಜನೆ,. ಕೂಡು ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಂಡು ಜಾರಿಗೊಳಿಸಲಾಗುತ್ತಿದೆ ಎಂದು ಸದಸ್ಯರ ಪ್ರಶ್ನೆಗೆ ಉತ್ತರಿಸಿದರು.

ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಪ್ರವಾಸಿ ತಾಣಗಳಲ್ಲಿ "ಪ್ರವಾಸಿ ಮಿತ್ರ' ಯೋಜನೆ ಜಾರಿಗೆ ತರಲಾಗಿದೆ ಎಂದು ಸದಸ್ಯರಿಗೆ ಸಚಿವರು ತಿಳಿಸಿದರು

ಮಮತ:ಕೆವಿವಿ:ಜಿಪಿಆರ್.

# ಆಹಾರ ಉತ್ಪಾದನೆಯಲ್ಲಿ ನಾವು ಸ್ವಾವಲಂಬಿಗಳಾಗಿದ್ದೇವೆ

– ಆರ್. ಧೃವನಾರಾಯಣ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ವಿಶ್ವವಿದ್ಯಾಲಯಗಳ ವಿಜ್ಞಾನಿಗಳ ಅವಿರತ ಸಂಶೋಧನೆ ಮತ್ತು ರೈತಾಪಿ ವರ್ಗದವರ ಶ್ರಮದ ಫಲವಾಗಿ ಇಂದು ಆಹಾರ ಉತ್ಪಾದನೆಯಲ್ಲಿ ನಾವು ಸ್ವಾವಲಂಭಿಗಳಾಗಿದ್ದು, ನಮ್ಮ ದೇಶಕ್ಕೆ ಮುಂಬರುವ 2 ವರ್ಷಗಳಿಗೆ ಆಗುವಷ್ಟು ಆಹಾರ ದಾಸ್ತಾನು ನಮ್ಮಲ್ಲಿದೆ ಎಂದು ತಿಳಿಸಲು ಸಂತಸವಾಗುತ್ತಿದೆ ಎಂದು ಚಾಮರಾಜ ನಗರ ಲೋಕಸಭಾ ಸದಸ್ಯರಾದ ಆರ್. ಧೃವನಾರಾಯಣ ಅವರು ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯ (ಜಿ.ಕೆ.ವಿ.ಕೆ) ಆವರಣದಲ್ಲಿ ಇಂದು ಕೃಷಿ ಮೇಳ –2015 ಕಾರ್ಯಕ್ರಮದ ಅಂಗವಾಗಿ ಹಸಿರು ಕ್ರಾಂತಿಯ ಸುವರ್ಣ ಮಹೋತ್ಸವ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡುತ್ತಾ, ವಿಶ್ವ ವಿದ್ಯಾನಿಲಯಗಳು ವಿದ್ಯಾರ್ಥಿಗಳಿಗೆ ಪದವಿ ನೀಡುವುದರ ಜೊತೆಗೆ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಕ್ಷೇತ್ರಗಳಲ್ಲಿ ಸಂಶೋಧನೆಗಳನ್ನು ಸಹ ಕೈಗೊಂಡು ಸಂಶೋಧನೆಯ ಫಲವನ್ನು ರೈತಾಪಿ ವರ್ಗಕ್ಕೆ ವಿಸ್ತರಿಸುವ ಅತ್ಯುತ್ತಮ ಕೆಲಸವನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಸೇರಿದಂತೆ ಇತರೆ ವಿಶ್ವ ವಿದ್ಯಾಲಯಗಳು ಸಹ ಮಾಡುತ್ತಿರುವುದು ಶ್ಲಾಘನೀಯವೆಂದರು.

ಬೆಳೆದಂತಹ ಬೆಳೆಗೆ ಉತ್ತಮ ಬೆಲೆ ಸಿಗದೆ ರೈತರು ಇಂದು ಸಂಕಷ್ಟದಲ್ಲಿದ್ದಾರೆ ಎಂದ ಅವರು, ಅದರಲ್ಲೂ ಉತ್ತರ ಕರ್ನಾಟಕ ಭಾಗದ ರೈತರು ತೀವ್ರ ಮಳೆ ಕೊರತೆಯನ್ನು ಎದುರಿಸಿ ತೀವ್ರ ತೊಂದರೆಯಲ್ಲಿದ್ದಾರೆ ಎಂದರು. ಆದ ಕಾರಣ ಇರುವ ನೀರಿನ ಸದ್ಬಳಕೆ ಮಾಡಿಕೊಳ್ಳುವ ಮೂಲಕ ರೈತರು ಒಂದೇ ತೆರನಾದ ಬೆಳೆಗಳನ್ನು ಅವಲಂಭಿಸದೆ ಸಮಗ್ರ ಕೃಷಿ ಕೈಗೊಂಡು ಆರ್ಥಿಕವಾಗಿ ಮುಂದೆ ಬರುವಂತೆ ಕರೆ ನೀಡಿದರು.

ಹಿರಿಯ ಕೀಟ ಶಾಸ್ತ್ರಜ್ಞ ಪ್ರೊ ಡಾ. ಟಿ. ಎಂ. ಮಂಜುನಾಥ್ ಅವರು ಹಸಿರು ಕ್ರಾಂತಿಯ ಬಗ್ಗೆ ಬೆಳಕು ಚೆಲ್ಲುತ್ತಾ, ಹಸಿರು ಕ್ರಾಂತಿ ನಮ್ಮ ದೇಶದ ಮಹಾನ್ ಸಾಧನೆಗಳಲ್ಲಿ ಒಂದಾಗಿದೆ. ಸ್ವಾತಂತ್ರ್ಯ ದೊರಕಿದ 18 ವರ್ಷಗಳ ನಂತರ ಹಸಿರು ಕ್ರಾಂತಿ ನಡೆದು ನಾವು ಆಹಾರ ಭದ್ರತೆಯನ್ನು ಹೊಂದುವಂತಾಯಿತು ಎಂದರು.

1947 ರಲ್ಲಿ ದೇಶದ ಆಹಾರ ಮತ್ತು ಆರ್ಥಿಕ ಪರಿಸ್ಥಿತಿ ಚಿಂತಾಜನಕವಾಗಿತ್ತು. ಹೊಲ ಗದ್ದೆಗಳಲ್ಲಿ ಇಳುವರಿ ಕಡಿಮೆಯಿದ್ದ ಕಾರಣ ಲಕ್ಷಾಂತರ ಜನ ಆಹಾರ ಸಮಸ್ಯೆಯನ್ನು ಎದುರಿಸುತ್ತಿದ್ದರು. ತದನಂತರ 1965–66 ಮತ್ತು 1975–76 ರ ಅವಧಿಯಲ್ಲಿ ಹಸಿರು ಕ್ರಾಂತಿ ನಡೆದು ದೇಶ ಆಹಾರ ಉತ್ಪಾದನೆಯಲ್ಲಿ ಗಣನೀಯವಾಗಿ ಪ್ರಗತಿಯನ್ನು ಸಾಧಿಸಿತ್ತು. ಹೆಚ್ಚು ಇಳುವರಿ ನೀಡುವಂತಹ ಮೆಕ್ಸಿಕನ್ ಗೋಧಿ ತಳಿ ಮತ್ತು ಫಿಲಿಫೈನ್ ದೇಶದ ಭತ್ತದ ತಳಿಗಳನ್ನು ದೇಶಕ್ಕೆ ಪರಿಚಯಿಸುವ ಮೂಲಕ ದೇಶೀಯ ತಳಿಗಳೊಂದಿಗೆ ಸಂಕಿರಣಗೊಳಿಸಿ ಹೆಚ್ಚು ಉತ್ಪಾದನೆ ತರುವಂತಹ ಕೆಲಸ ಹಸಿರು ಕ್ರಾಂತಿ ಅವಧಿಯಲ್ಲಿ ಯಶ್ವಸಿಯಾಗಿ ಜರುಗಿತ್ತು ಎಂದು ಸಮಗ್ರವಾಗಿ ವಿವರಿಸಿದರು.

ಹಸಿರು ಕ್ರಾಂತಿ ರಾಜ್ಯದ ಮೇಲೂ ಸಹ ಸಾಕಷ್ಟು ಪರಿಣಾಮ ಬೀರಿದ್ದು ರಾಜ್ಯದ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಹತ್ತಿ, ಸೂರ್ಯಕಾಂತಿ, ಭತ್ತ, ರಾಗಿ ಇವುಗಳ ಹೊಸ ಸಂಶೋಧನೆಗಳು ನಡೆದು ಉತ್ಪಾದನೆಯನ್ನು ಹೆಚ್ಚಿಸಲಾಯಿತು ಎಂದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಮಟ್ಟದ ರೈತ ಹಾಗೂ ರೈತ ಮಹಿಳೆ ಪ್ರಶಸ್ತಿಯನ್ನು ಚಾಮರಾಜ ನಗರ ಜಿಲ್ಲೆಯ ಜಯಸುಂದರ ನಾಯ್ಡು , ಶ್ರೀಮತಿ ಬೊಮ್ಮಮ್ಮ, ಮೈಸೂರು ಜಿಲ್ಲೆಯ ಪಿ. ರಮೇಶ್ ಮತ್ತು ಶ್ರೀಮತಿ ಭಾಗ್ಯಮ್ಮ ಪಿ. ಇವರುಗಳಿಗೆ ನೀಡಿ ಸನ್ಮಾನಿಸಲಾಯಿತು.

ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಮತ್ತು ಯುವ ರೈತ ಮಹಿಳಾ ಪ್ರಶಸ್ತಿಯನ್ನು ಚಾಮರಾಜ ನಗರದ ಭಾರತಿ, ಕೆ.ಬಿ. ಗುರುಪ್ರಸಾದ್, ಕೊಳ್ಳೇಗಾಲ ಮೇನಕಾತ್ಮಜ, ಸುರೇಶ್ ಡಿ, ಗುಂಡ್ಲುಪೇಟೆಯ ಮಹದೇವಮ್ಮ, ಶಿವಕುಮಾರ್ ಎಸ್, ಯಳಂದೂರಿನ ಶೃತಿ, ಮಹದೇವಸ್ವಾಮಿ ಆರ್. ಇವರುಗಳಿಗೆ ಮತ್ತು ಮೈಸೂರು ಜಿಲ್ಲೆಯ ಪಿರಿಯಾ ಪಟ್ಟಣದ ಸುಜಾತ ಮತ್ತು ಲಕ್ಷ್ಮಣ ಪಟೇಲ್. ಕೆ.ಆರ್. ನಗರದ ಎಂ. ಗಿರಿಜಾ, ಮುಕುಂದ, ಟಿ. ನರಸೀಪುರದ ಪ್ರೇಮಾ, ಬಿ. ರಾಜಶೇಖರ್, ಹುಣಸೂರಿನ ಕು. ಪ್ರೇಮಾ, ಜಿ. ಶಿವಕುಮಾರ್. ಹೆಚ್. ಡಿ. ಕೋಟೆಯ ಚೆನ್ನಮ್ಮ , ಕೆ.ಎನ್. ಸತೀಶ್, ಮೈಸೂರಿನ ಕವಿತಾ, ಎಂ. ಸ್ವಾಮಿ ಹಾಗೂ ನಂಜನಗೂಡಿನ ಮಂಗಳಮ್ಮ, ಟಿ.ವಿ. ಗಿರೀಶ್ ಅವರಿಗೆ ಪ್ರದಾನ ಮಾಡಲಾಯಿತು. ಮತ್ತು ಡಾ. ದ್ವಾರಕೀನಾಥ್ ಅತ್ಯುತ್ತಮ ರೈತ ಪ್ರಶಸ್ತಿಯನ್ನು ಕೆ.ಎಂ. ಮಂಜುನಾಥ್ ಅವರಿಗೆ ಹಾಗೂ ವಿಸ್ತರಣಾ ಕಾರ್ಯಕರ್ತ ಪ್ರಶಸ್ತಿಯನ್ನು ಅಸಿಸ್ಟೆಂಟ್ ಪ್ರೊ. ಡಾ. ಜಿ. ಎಂ. ಸುಜೀತ್ ಅವರಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವ್ಯವಸ್ಥಾಪನಾ ಮಂಡಳಿ ಸದಸ್ಯರುಗಳಾದ ಪ್ರೊ. ಎಲ್.ವಿ. ಹಿರೇವೆಂಕನಗೌಡರ್, ಶ್ರೀಮತಿ ಹೆಚ್. ಸಿ. ಆಶಾ ಶೇಷಾದ್ರಿ, ಬೆಂಗಳೂರಿನ ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಹೆಚ್. ಶಿವಣ್ಣ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಮಮತ:ಜಿಪಿಆರ್.

# ಒಂದು ದಿನದ ಉಚಿತ ತರಬೇತಿ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಮೈಸೂರು ತೋಟಗಾರಿಕಾ ಸೊಸೈಟಿಯು ನವೆಂಬರ್ 21 ರಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೆ “ ಇಕೆಬಾನ ” ಕುರಿತಂತೆ ಒಂದು ದಿನದ ಉಚಿತ ತರಬೇತಿ ಕಾರ್ಯಾಗಾರವನ್ನು ನಗರದ ಡಾ. ಎಂ. ಎಚ್. ಮರೀಗೌಡ ಮೆಮೋರಿಯಲ್ ಹಾಲ್, ಲಾಲ್‌ಬಾಗ್,ಬೆಂಗಳೂರು ಇಲ್ಲಿ ಹಮ್ಮಿಕೊಂಡಿದೆ.

ಹೆಚ್ಚಿನ ವಿವರಗಳಿಗಾಗಿ ಕಾರ್ಯದರ್ಶಿಗಳು, ಮೈಸೂರು ತೋಟಗಾರಿಕಾ ಸಂಘ, ಲಾಲ್‌ಬಾಗ್, ಬೆಂಗಳೂರು – 560 004 ಇವರನ್ನು ದೂರವಾಣಿ ಸಂಖ್ಯೆ 26576781 ಅಥವಾ ಮೊಬೈಲ್ ಸಂಖ್ಯೆ 9845803474/9986737142 ಮೂಲಕ ಸಂಪರ್ಕಿಸಬಹುದಾಗಿದೆ.

ಮಮತ:ಬಾಬು:ಜಿಪಿಆರ್

# ONE DAY FREE TRAINING CLASS

**Bangalore, November 20 (Karnataka Information)**

**The Mysore Horticultural Society is conducting One day free training class on Ikebana free training on 21st November 2015 from 2.00 P.M. to 5.00 P.M. at dr. M.H. Marigowda Memorial Hall, Lalbagh, Bangalore.**

**For details contact the Secretary, Mysore Horticultural Society, Lalbagh, Bangalore – 560 004 (Phone No. 26576781 or Mobile 9845803474/9886737142.**

**mamatha:babu:gpr**

# ನಾರೀಶಕ್ತಿ ಪುರಸ್ಕಾರ್ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

2015–16 ನೇ ಸಾಲಿಗೆ ಕೇಂದ್ರ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಾಲಯದಿಂದ ಮಾರ್ಚ್ 8 ರಂದು ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚಾರಣೆಯಂದು ಮಹಿಳೆಯರ ಸರ್ವತೋಮುಖ ಬೆಳವಣಿಗೆಗಾಗಿ ಮತ್ತು ಉತ್ತಮ ನಗರಾಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಕನಿಷ್ಠ ಐದು ವರ್ಷಗಳ ಸೇವೆ ಸಲ್ಲಿಸಿರುವ ಸಂಸ್ಥೆ ಹಾಗೂ ವ್ಯಕ್ತಿಗಳಿಗೆ ಈ ಕೆಳಕಂಡ ಕ್ಷೇತ್ರಗಳಲ್ಲಿ ನಾರೀಶಕ್ತಿ ಪುರಸ್ಕಾರ್ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಲಾಗುವುದು.

ಈ ಪ್ರಶಸ್ತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ನವೆಂಬರ್ 24 ಕೊನೆಯ ದಿನವಾಗಿದ್ದು, ಅರ್ಜಿಗಳನ್ನು ಎಲ್ಲಾ ದಾಖಲಾತಿಗಾಳೊಂದಿ ಇ-ಮೇಲ್ ವಿಳಾಸ adww.dwcd@gmail.com ಕ್ಕೆ ಸ್ಕ್ಯಾನ್ ಮಾಡಿ ಕಳುಹಿಸಲು ಕೋರಿದೆ.

ಅಭ್ಯರ್ಥಿಯ ಹೆಸರು ಹಾಗೂ ವಿಳಾಸ, ದೂರವಾಣಿ/ಮೊಬೈಲ್ ಸಂಖ್ಯೆ,ಇ-ಮೇಲ್ ಐಡಿ. ಸೇವೆ ಸಲ್ಲಿಸಿರುವ ಕ್ಷೇತ್ರದ ಸಂಕ್ಷಿಪ್ತ ವಿವರ/ಪಡೆದ ಪ್ರಶಸ್ತಿಗಳ ವಿವರವನ್ನು ಕಳುಹಿಸಿಕೊಡಬೇಕು.

ಹೆಚ್ಚಿನ ವಿವರಗಳಿಗಾಗಿ ಕೇಂದ್ರ ಸರ್ಕಾರದ ವೆಬ್‌ಸೈಟ್ http://www.wcd.nic.in ಹಾಗೂ ದೂರವಾಣಿ 08022353833 ನ್ನು ಸಂಪರ್ಕಿಸಬಹುದಾಗಿದೆ.

1.

| | ಪ್ರಶಸ್ತಿಯ ವಿವರ | ಕ್ಷೇತ್ರ | ಪ್ರಶಸ್ತಿ ಮೊತ್ತ |
|---|---|---|---|
| | 2 | 3 | 6 |
| | ರಾಣಿ ರುದ್ರಮ್ಮದೇವಿ ಪ್ರಶಸ್ತಿ (2 ಜಿಲ್ಲಾ ಪಂಚಾಯತ್ ಗಳಿಗೆ ಮತ್ತು 2 ಗ್ರಾಮಪಂಚಾಯಿತಿಗಳಿಗೆ) | ಬೇಟಿ ಬಚಾವೋ ಬೇಟಿ ಪಡಾವೋ ಕಾರ್ಯಕ್ರಮ ಪಂಚಾಯತಿ ಮೂಲಕ ಅಥವಾ ಸರ್ಕಾರದ ಆದ್ಯತಾ ಕಾರ್ಯಕ್ರಮಗಳಿಗೆ (Flagship programme) | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |
| | ಮಾತಾ ಜೀಜಾಬಾಯಿ ಪ್ರಶಸ್ತಿ (ನಗರಾಭಿವೃದ್ಧಿ ಸಂಸ್ಥೆ, ಮುನಿಸಿಪಲ್ ಅಥವಾ ಕಾರ್ಪೊರೇಷನ್) | 1)ಉತ್ತಮ ನಗರಾಭಿವೃದ್ಧಿ ಸಂಸ್ಥೆ -ಮಹಿಳೆಯರ ಕ್ಷೇತ್ರದಲ್ಲಿನ ಸೇವೆ ಮತ್ತು ಸೌಲಭ್ಯ ನೀಡಿಕೆಗಾಗಿ 2)ಮುನಿಸಿಪಲ್ ಸಂಸ್ಥೆ ಅಥವಾ ಕಾರ್ಪೊರೇಷನ್ | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |
| | ಕನ್ನಗಿದೇವಿ ಪ್ರಶಸ್ತಿ (ರಾಜ್ಯಕ್ಕೆ) | ಹೆಣ್ಣುಮಕ್ಕಳ ಲಿಂಗಾನುಪಾತ ಹೆಚ್ಚಿಸುವ ವಿಷಯದಲ್ಲಿ ಗಣನೀಯ ಸೇವೆ ಸಲ್ಲಿಸಿದ ರಾಜ್ಯಕ್ಕೆ | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |

| | | | |
|---|---|---|---|
| | ರಾಣಿ ಗೈದಿನ್‌ಲಿಯಾ ಜೆಲಿಯಾಂಗ್ ಪ್ರಶಸ್ತಿ (Best Civil Society Organaisation) | ಉತ್ತಮ ನಾಗರೀಕ ಸಮಾಜ ಸಂಸ್ಥೆಗೆ (Best Civil Society Organaisation) ಮಹಿಳೆಯರ ಕಲ್ಯಾಣ ಕಾರ್ಯಕ್ರಮಗಳು ಮತ್ತು ಮಹಿಳೆಯರ ಉತ್ತಮ ಜೀವನಕ್ಕಾಗಿ ಕಳೆದ 5 ವರ್ಷ ಗಳಿಂದ ಶ್ರಮಿಸಿರುವ ಸಂಸ್ಥೆಗೆ | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |
| | ದೇವಿ ಅಹಲ್ಯ ಹೋಳ್ಕರ್ (Best private sector organization /public sector undertaking corporate House/PSU`s) | Best private sector organization/public sector undertaking corporate House/PSU`s addressing problem of women by providing gainful employment (Women Formers, enterprises) good health, education, environment/Safe spaces for women) | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |
| | ರಾಣಿ ಲಕ್ಷ್ಮಿಬಾಯಿ ಪ್ರಶಸ್ತಿ (best Institution for research and development in the field of women empowerment | Award for best Institution for research and develop- -ment in the field of women empowerment.<br><br>Institution contribution for women causes including work in the research and development (technology) dissemination of knowledge in the various issues related to women. | ತಲಾ ಪ್ರಶಸ್ತಿಗೆ ರೂ.2.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |
| | ನಾರೀಶಕ್ತಿ<br><br>ವ್ಯಕ್ತಿಗಳಿಗೆ (ಒಟ್ಟು 9 ಪ್ರಶಸ್ತಿಗಳು) | Award for courage of bravery for women has show exemplary courage and has set and example and achieved laurels in | ತಲಾ ಪ್ರಶಸ್ತಿಗೆ ರೂ.1.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |

| | | | |
|---|---|---|---|
| | | the face of diversity. | |
| | | Women`s endeavour/<br>Community work/<br>making difference/<br>Women empowerment | ತಲಾ ಪ್ರಶಸ್ತಿಗೆ ರೂ.1.00 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ |

ಮಮತ:ಬಾಬು:ಜಿಪಿಆರ್

# ಸೂರ್ಯಮಿತ್ರ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಕೇಂದ್ರ ಸರ್ಕಾರ ಆಯೋಜಿಸಿರುವ ಸೂರ್ಯಮಿತ್ರ ಕೌಶಲ್ಯ ಅಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

ತರಬೇತಿಯ ಅವಧಿಯು 3 ತಿಂಗಳಾಗಿದ್ದು, ಡಿಸೆಂಬರ್ 4 ರಿಂದ ತರಬೇತಿ ಆರಂಭಗೊಳ್ಳಲಿದೆ. ಅರ್ಜಿ ಸಲ್ಲಿಸಲು ಎಲೆಕ್ಟ್ರಿಕಲ್, ಮೈಕಾನಿಕಲ್, ಎಲೆಕ್ಟ್ರಾನಿಕ್ಸ್‌ನಲ್ಲಿ ಡಿಪ್ಲಮೋ ಅಥವಾ ಐ.ಟಿ.ಐ. ಯಲ್ಲಿ ಎಲೆಕ್ಟ್ರಿಕಲ್, ಮೈಕಾನಿಕಲ್, ಎಲೆಕ್ಟ್ರಾನಿಕ್ಸ್‌ನಲ್ಲಿ ವೈರ್‌ಮೆನ್, ಫಿಟ್ಟರ್, ಶೀಟ್ ಮೆಟಲ್‌ನಲ್ಲಿ ಅರ್ಹತೆ ಹೊಂದಿರಬೇಕು. ಅದಕ್ಕಿಂತ ಹೆಚ್ಚಿನ ವಿದ್ಯಾಭ್ಯಾಸ ಹೊಂದಿದ್ದರೆ ಅರ್ಹರಿರುವುದಿಲ್ಲ. ಅರ್ಜಿ ಸಲ್ಲಿಸಲು ನವೆಂಬರ್ 26 ಕೊನೆಯ ದಿನವಾಗಿರುತ್ತದೆ.

ನಿಗದಿತ ನಮೂನೆ ಅರ್ಜಿಗೆ ಅಂತರ್ಜಾಲ www.mgired.kar.nic.in ನಲ್ಲಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ, ಸಂಯೋಜಕರು, ಸೂರ್ಯಮಿತ್ರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ,

ದೂರವಾಣಿ ಸಂಖ್ಯೆ 080 – 23626359 ಅಥವಾ ಮೊಬೈಲ್ ಸಂಖ್ಯೆ 9986045932, 9844049922 ಅಥವಾ ಮಿಂಚಂಚೆ mgiredsuryamitra@gmail.com ನ್ನು ಸಂಪರ್ಕಿಸಲು ಕೋರಿದೆ.

ಮಮತ:ಬಾಬು:ಜಿಪಿಆರ್

# ಕನ್ನಡ ಸಾಹಿತ್ಯ ಪರಿಷತ್ ಚುನಾವಣೆ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ/ ಜಿಲ್ಲಾ/ಗಡಿನಾಡು ಘಟಕ ಅಧ್ಯಕ್ಷರ ಚುನಾವಣೆ ನಡೆಸಲು ಕೆ. ನಾಗರಾಜು ಕೆ.ಎ.ಎಸ್. ಅವರು ಕನ್ನಡ ಸಾಹಿತ್ಯ ಪರಿಷತ್ತು ಕೇಂದ್ರ ಚುನಾವಣಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಚುನಾವಣೆಯಲ್ಲಿ ರಾಜ್ಯದ 30 ಜಿಲ್ಲೆಗಳು ಹಾಗೂ ಗಡಿ ರಾಜ್ಯಗಳು ಮತ್ತು ಹೊರನಾಡ ಮತದಾರರು ಮತ ಚಲಾಯಿಸಿ, ಕೇಂದ್ರ ಪರಿಷತ್ತಿನ ಅಧ್ಯಕ್ಷರು, 30 ಜಿಲ್ಲಾಧ್ಯಕ್ಷರು ಹಾಗೂ 4 ಗಡಿ ರಾಜ್ಯಗಳ ಅಧ್ಯಕ್ಷರು ಹೀಗೆ 35 ಸ್ಥಾನಗಳಿಗೆ ಅಧ್ಯಕ್ಷರುಗಳನ್ನು ಆಯ್ಕೆ ಮಾಡುತ್ತಾರೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ನಡೆಯುವ ಚುನಾವಣೆಯ ಮತದಾರರ ಕರಡು ಪಟ್ಟಿಯ ತಯಾರಿಕೆಯ ಕಾರ್ಯ ಬಹುತೇಕ ಮುಕ್ತಾಯದ ಹಂತದಲ್ಲಿದ್ದು ಕರಡು ಮತದಾರರ ಪಟ್ಟಿ ತಯಾರಿಸುವ ಕಾರ್ಯ ಮುಕ್ತಾಯವಾಗುತ್ತಿದ್ದಂತೆ ಚುನಾವಣಾ ವೇಳಾಪಟ್ಟಿಯನ್ನು ಪ್ರಕಟಿಸಲಾಗುವುದು. ತದನಂತರ ಕರಡು ಮತದಾರರ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಹದಿನೈದು ದಿನಗಳ ಕಾಲಾವಕಾಶವಿರುತ್ತದೆ. ಕನ್ನಡ ಸಾಹಿತ್ಯ ಪರಿಷತ್ತಿನ ನಿಭಂದನೆಗಳಂತೆ ಕರಡು ಪಟ್ಟಿ ಪ್ರಕಟಣೆಯಾದ 75 ದಿನಗಳ ನಂತರ ಚುನಾವಣೆ ನಡೆಸಲು ಅವಕಾಶವಿರುತ್ತದೆ. ಚುನಾವಣೆಯನ್ನು ಶಾಂತಿಯುತವಾಗಿ ನಿಷ್ಪಕ್ಷಪಾತವಾಗಿ, ಪಾರದರ್ಶಕವಾಗಿ ನಡೆಸಲು ಸಾರ್ವಜನಿಕರು, ಸದಸ್ಯರು, ಮತದಾರರು ಸಹಕರಿಸಬೇಕೆಂದು ಕೆ. ನಾಗರಾಜು ಕೋರಿದ್ದಾರೆ.

ಪಲ್ಲವಿ/ಕೆಎಂ

# ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

ಬೆಂಗಳೂರು, ನವೆಂಬರ್ 20 (ಕರ್ನಾಟಕ ವಾರ್ತೆ)

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು

ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ:22–11–2015ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1. ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಉದಯರಾಗ**" ಎಂಬ ಶೀರ್ಷಿಕೆಯಡಿ ಶ್ರೀ ಎನ್.ಎಂ.ಲೋಕೇಶ್, ಗಂಗೋತ್ರಿ ಕಲಾ ಸಂಘ, ಮಾಲೂರುರವರಿಂದ ದಾಸರಪದ ಭಕ್ತಿಗೀತೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
2. ಬೆಳಿಗ್ಗೆ 8.00 ಗಂಟೆಯಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆಯ 9ನೇ ಪಡೆಯ ಬ್ಯಾಂಡ್ ಕಲಾವಿದರು ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ ಆಕರ್ಷಕ "**ಪೊಲೀಸ್ ಬ್ಯಾಂಡ್**" ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಡುತ್ತಾರೆ.
3. ಸಂಜೆ 05.00 ಗಂಟೆಯಿಂದ ಸಂಜೆ 06.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "**ಉದ್ಯಾನವನದಲ್ಲಿ ಸಂಧ್ಯಾರಾಗ**" ಎಂಬ ಶೀರ್ಷಿಕೆಯಡಿ ಶ್ರೀ ದತ್ತಶ್ರೀ ಸಾಂಸ್ಕೃತಿಕ ವೇದಿಕೆರವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
4. ಬೆಳಿಗ್ಗೆ 6.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
5. ಉದ್ಯಾನವನದ ಆವರಣದಲ್ಲಿ ಜೈವಿಕ್ ಕೃಷಿಕ್ ಸೊಸೈಟಿ(ರಿ), ಲಾಲ್‌ಬಾಗ್, ಬೆಂಗಳೂರುರವರು ತಮ್ಮ ಮಾರಾಟ ಮಳಿಗೆಯಲ್ಲಿ ಸಾವಯವ ಪದ್ಧತಿಯಲ್ಲಿ ಬೆಳೆದ ವಿವಿಧ ರೀತಿಯ ಹಣ್ಣುಗಳು ಮತ್ತು ಹಣ್ಣಿನ ಜ್ಯೂಸ್ ಮತ್ತು ಇತರೆ ಸಾವಯವ ಆಹಾರ ಪದಾರ್ಥಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
6. ಉದ್ಯಾನವನದ ಆವರಣದಲ್ಲಿ ಹಾಪ್‌ಕಾಮ್ಸ್, ಬೆಂಗಳೂರುರವರು ವಿವಿಧ Cut Fruits, Dry Fruits ಮತ್ತು ವಿವಿಧ ತಾಜಾ ಹಣ್ಣುಗಳು, ಪ್ಯಾಕ್ ಮಾಡಿದ ತಾಜಾ ತರಕಾರಿಗಳು ಹಾಗೂ ಹಣ್ಣಿನ ಜ್ಯೂಸ್‌ಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
7. ಉದ್ಯಾನವನದ ಆವರಣದಲ್ಲಿ ದಿ ನರ್ಸರಿಮೆನ್ ಕೋ–ಆಪರೇಟೀವ್ ಸೊಸೈಟಿ, ಲಾಲ್‌ಬಾಗ್, ಬೆಂಗಳೂರುರವರು ವಿವಿಧ ಅಲಂಕಾರಿಕ ಗಿಡಗಳು ಮತ್ತು ಉದ್ಯಾನವನ ಸಲಕರಣೆಗಳ ಮಾರಾಟವನ್ನು ಕೈಗೊಳ್ಳುತ್ತಾರೆ.
8. ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರುರವರ ವತಿಯಿಂದ ನಗರ ಕೇಂದ್ರ ಗ್ರಂಥಾಲಯ ಮತ್ತು ಇಂದಿರಾ ಪ್ರಿಯದರ್ಶಿನಿ ಮಕ್ಕಳ ಗ್ರಂಥಾಲಯದ ಆವರಣದಲ್ಲಿ ಪುಸ್ತಕ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
9. ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ **ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ** ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

## ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:

## I. ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ

- ಬೆಳಿಗ್ಗೆ 7.00 ಗಂಟೆಯಿಂದ ಬೆಳಿಗ್ಗೆ 8.00 ಗಂಟೆಯವರೆಗೆ ಯೂನಿವರ್ಸ್ ಆರ್ಟ್ ಫೌಂಡೇಶನ್ ಸಹಯೋಗದೊಂದಿಗೆ ನಿನಾರ್ಥಿಶ ತಂಡದಿಂದ ಭರತ ನಾಟ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 9.00 ಗಂಟೆಯಿಂದ ಬೆಳಿಗ್ಗೆ 10.00 ಗಂಟೆಯವರೆಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವತಿಯಿಂದ ಬಾಲಭವನ ಸೊಸೈಟಿ, ಬೆಂಗಳೂರುರವರ ಸಹಯೋಗದೊಂದಿಗೆ ನೃತ್ಯಧಾಮ ಟೆಂಪಲ್ ಆಫ್ ಫೈನ್ ಆರ್ಟ್ಸ್, ಬೆಂಗಳೂರುರವರ ವತಿಯಿಂದ ಡಾ. ರೇಖಾ ರಾಜುರವರ ಶಿಷ್ಯರಿಂದ ನೃತ್ಯ ಪ್ರದರ್ಶನವನ್ನು ಏರ್ಪಡಿಸಲಾಗಿದೆ.
- ಸಂಜೆ 4.00 ಗಂಟೆಯಿಂದ 5.00 ಗಂಟೆಯವರೆಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಮತ್ತು ಅಕ್ಷಯ ಫೌಂಡೇಷನ್ ರವರ ಸಹಯೋಗದೊಂದಿಗೆ ಡಾ. ಎಚ್.ಕೆ. ಮಳಲಿಗೌಡ, ಕನ್ನಡ ಪ್ರಾಧ್ಯಾಪಕರು, ಆಚಾರ್ಯ ಪಾಠಶಾಲೆ ಕಲೆ ಮತ್ತು ವಿಜ್ಞಾನ ಕಾಲೇಜು, ಬೆಂಗಳೂರು ಇವರಿಂದ "ಟಿ.ಪಿ. ಕೈಲಾಸಂರವರ ನಾಟಕಗಳು ಒಂದು ವಿಶ್ಲೇಷಣೆ" ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ಮತ್ತು ಐಶ್ವರ್ಯ ವಿಜಯ್ ಕುಮಾರ್‌ರವರಿಂದ ಭರತನಾಟ್ಯ ಮತ್ತು ಜನಪದ ನೃತ್ಯ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

## II. ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ

- ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ರೇಷ್ಮೆ ಇಲಾಖೆಯ ವತಿಯಿಂದ ರೇಷ್ಮೆಗೂಡಿನಿಂದ ಮಾಡಿದ ಹಾರ ಮತ್ತು ಗೃಹಾಲಂಕಾರ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 7.00 ಗಂಟೆಯಿಂದ 8.00 ಘ ಟೆ ುವರಿಗೆ ಸಾರ್ವಜನಿಕರು ಅನಗತ್ಯವಾಗಿ ಆಹಾರವನ್ನು ವ್ಯರ್ಥ ಮಾಡುವುದನ್ನು ತಡೆ ುುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ್ತವ್ಯ ತಂಡ, ಬೆ ಗಳೂರುರವರಿ ದ ಬೀದಿ ನಾಟಕ ಕಾ ರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 6.00 ಗಂಟೆಯಿಂದ ಬೆಳಿಗ್ಗೆ 10.00 ಗಂಟೆಯವರೆಗೆ ವಿದ್ಯಾರಣ್ಯ ಸ್ವಯಂ ಸೇವಾ ಸಂಸ್ಥೆ, ಮಂಡೂರುರವರ ವತಿಯಿಂದ ಹಿರಿಯ ನಾಗರೀಕರು ಮತ್ತು ಬೀದಿ ಮಕ್ಕಳಿಂದ ಮೇಣದ ಬತ್ತಿ, ಪೊರಕೆಗರಿ ಮತ್ತು ಕವರ್ ತಯಾರಿಕೆ ಬಗ್ಗೆ ಪ್ರಾತ್ಯಕ್ಷತೆ ಮತ್ತು ಮಾರಾಟ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

# ಅವಧಿ ವಿಸ್ತರಣೆ

**ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)**

2016-17 ನೇ ಸಾಲಿನಲ್ಲಿ ಹೊಸದಾಗಿ ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳನ್ನು ತೆರೆಯಲು ಉದ್ದೇಶಿಸಿರುವ ಅರ್ಹ ನೋಂದಾಯಿತ ಸಂಸ್ಥೆಗಳು ಆನ್-ಲೈನ್ ತಂತ್ರಾಂಶದಲ್ಲಿ (ONLINE) ಅರ್ಜಿಯನ್ನು ಸಲ್ಲಿಸಬೇಕಾಗಿದ್ದ ಕಡೆಯ ದಿನಾಂಕವನ್ನು 30-11-2015 ರವರೆಗೆ ವಿಸ್ತರಿಸಿದೆ.

**ಆನ್ ಲೈನ್‌ನಲ್ಲಿ ಭರ್ತಿಮಾಡಿದ ಅರ್ಜಿಯ ಮುದ್ರಿತ ಪ್ರತಿಯನ್ನು ಅಗತ್ಯ ದಾಖಲೆಗಳೊಂದಿಗೆ ದಿನಾಂಕ : 10–12–2015 ರೊಳಗೆ ಆಯಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿಗೆ ಸಲ್ಲಿಸುವುದು. ಅರ್ಜಿಯನ್ನು ಆನ್‌ಲೈನ್ ತಂತ್ರಾಂಶದ ಮೂಲಕ ವೀಕ್ಷಿಸಬಹುದಾಗಿದೆ.**

**ಪಲ್ಲವಿ:ಬಾಬು:ಜಿಪಿಆರ್.**

# ಸಾರಿಗೆ ಅದಾಲತ್

**ಬೆಂಗಳೂರು, ನವೆಂಬರ್ 19 (ಕರ್ನಾಟಕ ವಾರ್ತೆ)**

**ಜಯನಗರದ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಕಚೇರಿ, ಬೆಂಗಳೂರು (ದಕ್ಷಿಣ) ಇಲ್ಲಿ ಸಾರಿಗೆ ಅದಾಲತ್‌ನ್ನು ನವೆಂಬರ್ 23 ರಂದು ಮಧ್ಯಾಹ್ನ 3.00 ಗಂಟೆಗೆ ಕಚೇರಿಯ 2 ನೇ ಮಹಡಿಯ ಅಡಿಟೋರಿಯಂನಲ್ಲಿ ಏರ್ಪಡಿಸಲಾಗಿದೆ.**

**ಅದಾಲತ್‌ನಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳೂ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಸಾರಿಗೆ ಇಲಾಖೆಗೆ ಸಂಬಂಧಿಸಿದ ಆಹವಾಲು ಮತ್ತು ಕುಂದು ಕೊರತೆಗಳ ಪರಿಹಾರಕ್ಕಾಗಿ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಿದೆ.**

**ಪಲ್ಲವಿ:ಬಾಬು:ಜಿಪಿಆರ್.**

# ವಿಶೇಷ ಲೇಖನ:

## ಬೆಳಗಾವಿಯಲ್ಲಿ ನವೆಂಬರ್ 21 ಮತ್ತು 22ರಂದು ಬುಡಕಟ್ಟು ಉತ್ಸವ–2015

ಬುಡಕಟ್ಟು ಸಮುದಾಯುಗಳ ಆಚಾರ–ವಿಚಾರ ಮತ್ತು ಸಂಪ್ರದಾಯ, ಸಂಸ್ಕೃತಿಯನ್ನು ನಾಗರೀಕ ಪ್ರಪಂಚಕ್ಕೆ ಪರಿಚಯಿಸುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಸರ್ಕಾರ ಹಮ್ಮಿಕೊಂಡಿದೆ. ಬೆಳಗಾವಿ ನಗರದಲ್ಲಿ ದಿನಾಂಕ; 21 ಮತ್ತು 22 ನವೆಂಬರ್–2015 ರಂದು ಕುಮಾರ ಗಂಧರ್ವ ರಂಗಮಂದಿರ, ಎರಡು ದಿನಗಳ ಕಾಲ 'ಬುಡಕಟ್ಟು ಉತ್ಸವ' ವನ್ನು ಆಯೋಜಿಸಲಾಗಿದೆ.

ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಮತ್ತು ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು ವತಿಯಿಂದ ಜಿಲ್ಲಾಡಳಿತ ಬೆಳಗಾವಿ ಹಾಗೂ

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ ಇವರುಗಳ ಸಹಯೋಗದೊಂದಿಗೆ ಆಯೋಜಿಸಿರುವ ಈ ಉತ್ಸವದ ಉದ್ಘಾಟನೆಯನ್ನು ಸಣ್ಣ ಕೈಗಾರಿಕಾ ಸಚಿವರು ಮತ್ತು ಬೆಳಗಾವಿ ಜಿಲ್ಲಾ ಉಸ್ತುವಾರಿ ಸಚಿವರಾದ ಸತೀಶ ಲ. ಜಾರಕಿಹೊಳಿ ಅವರು ನೆರವೇರಿಸುವರು. ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಎಚ್. ಅಂಜನೇಯ ಅವರು ಡುಂಗ್ರಿ ಗರಾಸಿಯಾ ಬುಡಕಟ್ಟು ಭಾಷಾ ಶಬ್ದಕೋಶವನ್ನು ಬಿಡುಗಡೆ ಮಾಡುವರು.

ಈ ಉತ್ಸವವು ರಾಜ್ಯದಲ್ಲಿ ನೆಲೆಸಿರುವ 50 ಬುಡಕಟ್ಟು ಸಮುದಾಯಗಳ ಸಮ್ಮಿಲನದ ವೇದಿಕೆಯಾಗುವುದರ ಜತೆಗೆ ಬುಡಕಟ್ಟು ಸಂಸ್ಕೃತಿಗಳ ಅನಾವರಣ, ಭ್ರಾತೃತ್ವ ಹೊಂದಲು ಅವಕಾಶ ಕಲ್ಪಿಸಲಿದೆ. ಈ ಎರಡು ದಿನಗಳಲ್ಲಿ ವಿವಿಧ ಬುಡಕಟ್ಟುಗಳ ಸಾಂಪ್ರದಾಯಿಕ ಕಲಾತಂಡಗಳ ಮೆರವಣಿಗೆ ಸೇರಿದಂತೆ ಬುಡಕಟ್ಟು ಸಮುದಾಯದವರ ಜೀವನಶೈಲಿ, ಆಚಾರ-ವಿಚಾರಗಳ ಕುರಿತಾದ ಸಾಕ್ಷ್ಯಚಿತ್ರಗಳನ್ನು ಸಹ ಪ್ರದರ್ಶನಗೊಳಿಸಲಾಗುವುದು. ಪ್ರಮುಖವಾಗಿ ಬುಡಕಟ್ಟು ಸಮುದಾಯದವರ ಸಂಪ್ರದಾಯಿಕ ಪರಿಕರಗಳ ಪ್ರದರ್ಶನದ ಜೊತೆಗೆ ಮಾರಾಟಕ್ಕೆ ಮಳಿಗೆಗಳನ್ನೂ ಏರ್ಪಡಿಸಲಾಗಿದೆ. ಹಲವಾರು ಬುಡಕಟ್ಟು ಸಮುದಾಯವರು ತಯಾರಿಸಿದಂತಹ ಸಂಪ್ರದಾಯಿಕ ವಸ್ತುಗಳ ಉತ್ಪನ್ನಗಳ ಜೊತೆಗೆ ಸೋಲಿಗ, ಜೇನುಕುರುಬ, ಸಿದ್ದಿ, ಎರವ, ಹಕ್ಕಿಪಿಕ್ಕಿ ಇನ್ನೂ ಹಲವು ಬುಡಕಟ್ಟು ಸಮುದಾಯಗಳು ತಯಾರಿಸಿದ ಅರಣ್ಯ ಕಿರುಉತ್ಪನ್ನ ಮತ್ತು ಔಷಧಿಗಳ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗಿದೆ.

ಉತ್ಸವದಲ್ಲಿ ಭಾಗವಹಿಸುವ ಬುಡಕಟ್ಟು ಕಲಾತಂಡಗಳಿಗೆ ಊಟ, ವಸತಿ ಮತ್ತು ಪ್ರಯಾಣದ ವೆಚ್ಚದ ಜೊತೆಗೆ ಪ್ರೋತ್ಸಹಧನವನ್ನು ಸಹಾ ಸಂಸ್ಥೆ ನೀಡಲಿದೆ. ಈಗಾಗಲೇ ಜಿಲ್ಲಾ ಮಟ್ಟದ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಬುಡಕಟ್ಟು ಕಲಾತಂಡಗಳನ್ನು ಆಯ್ಕೆ ಮಾಡಿ ಒಬ್ಬ ನೋಡಲ್ ಅಧಿಕಾರಿಯಾಗಿ ಕಳುಹಿಸುವಂತೆ ಸೂಚಿಸಲಾಗಿದೆ.

ಪರಿಶಿಷ್ಟ ಪಂಗಡದ ಎಲ್ಲಾ ಬುಡಕಟ್ಟು ಸಮುದಾಯದ ಕಲಾತಂಡಗಳು ಮತ್ತು ಬುಡಕಟ್ಟು ಸಮುದಾಯದ ಸಮಸ್ತ ನಾಗರೀಕರು ಈ ಎರಡು ದಿನಗಳ ಉತ್ಸವದಲ್ಲಿ ಪಾಲ್ಗೊಳ್ಳಲು ಇದೊಂದು ಅದ್ಭುತ ಅವಕಾಶ, ಎಂದು ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ನಿರ್ದೇಶಕ ಪ್ರೊ. ಟಿ.ಟಿ. ಬಸವನಗೌಡ ಅವರು ಅಭಿಪ್ರಾಯ ಪಟ್ಟಿದ್ದಾರೆ.

ಪಲ್ಲವಿ ಹೊನ್ನಾಪುರ